# ಎನ್‌ಐಟಿಕೆಯಿಂದ ಡರ್ಟ್ ಇ-ಬೈಕ್ ಅಭಿವೃದ್ಧಿ



**ಸುರತ್ಕಲ್, ಡಿ. 29:** ಎನ್‌ಐಟಿಕೆಯ ಸಿಎಸ್‌ಡಿ ಸಂಶೋಧನಾ ವಿಭಾಗವು ಅಭಿವೃದ್ಧಿ ಪಡಿಸಿ ವಿನ್ಯಾಸ ಗೊಳಿಸಿದ ಅಭಿವೃದ್ಧಿಪಡಿಸಿದ ಡರ್ಟ್ ಇ-ಬೈಕ್ ಅನ್ನು ಎನ್‌ಐಟಿಕೆಯಲ್ಲಿ ಅನಾವರಣಗೊಳಿಸಲಾಯಿತು. ಪ್ರಾಕೃತಿಕ ವಿಕೋಪ ಸಂದರ್ಭ, ಹಿಮ ಕುಸಿತ ವೇಳೆ ರಕ್ಷಣೆ, ಬೆಟ್ಟ ಗುಡ್ಡಗಳಲ್ಲಿ ಸಲೀಸಲಾಗಿ ಓಡಾಡುವ ಸಾಮರ್ಥ್ಯವನ್ನು ಹೊಂದಿದೆ. ಮರಳು ಅಥವಾ ಮಣ್ಣಿನ ಭೂಪ್ರದೇಶದಲ್ಲಿರುವ ಕರಾವಳಿ ಪೊಲೀಸ್, ಮಿಲಿಟರಿ ಮತ್ತು ಕೋಸ್ಟ್ ಗಾರ್ಡ್ ಸಿಬಂದಿ, ಅರಣ್ಯ ಅಧಿಕಾರಿಗಳಿಗೂ ಇದು ಬಹುಪಯೋಗಿ. ಇದನ್ನು ಹಳೆ ವಿದ್ಯಾರ್ಥಿಗಳ ಸಂಘದ ಹಣಕಾಸು ಸಹಕಾರ ಹಾಗೂ ವಿವಿಧ ಸಂಸ್ಥೆಗಳ ನೆರವಿನಡಿ ಎನ್‌ಐಟಿಕೆ ವಿನ್ಯಾಸಗೊಳಿಸಿ ಅಭಿವೃದ್ಧಿ ಮಾಡಿದೆ.

Udayavani, Date: 30/12/22, p. no - Sudin - 02